Regd No B G 155

(47) 2

10-3-1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು – ಅರಮನೆ ಸಿಂಸ್ಕೇದಾರ್ ಎಂ ವಿ ಸುಬ್ಬರಾಯರು ಸಂಪಾದಕರು – ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ ಪಿ

ಶ್ರೀ ನಾರಾಯಣತೀರ್ಥರು

ಅಮರ ಕೃಷ್ಣಲೀಲಾ ತರಂಗಿಣಿಯ ಗ್ರಂಥಕರ್ತ ಶ್ರೀ ನಾರಾಯಣತೀರ್ಥರು 17 ನೇ ಶತಮಾನದಲ್ಲಿ ತಂಜಾವೂರು ಜಿಲ್ಲೆಯ ತಿರುವಯ್ಯಾರಿನ ಪಶ್ಚಿಮಕ್ಕೆ 7 ಮೈಲಿ ದೂರದಲ್ಲಿರುವ ಪರಾಶಪುರಿನಲ್ಲಿ ಅಭ್ಯುದಯಗೊಂಡವರು : ಈ ಗ್ರಂಥವನ್ನು ಅಲ್ಲಿಯ ಶ್ರೀ ವೆಂಕಟಾಚಲಪತಿ ದೇವಾಲಯದಲ್ಲಿ ರಚಿಸಿದರು.

ಇವರು ಸನ್ಯಾಸಿಗಳಾಗಿದ್ದು ಅನೇಕ ತೀರ್ಥಕ್ಷೇತ್ರಗಳಿಗೆ ಭೇಟಿ ಕೊಟ್ಟಿದ್ದರು : ಒಂದು ರಾತ್ರಿಯಲ್ಲಿ ಕನ್ನಡ ಯಾತ್ರಾ ಸಂದರ್ಭದಲ್ಲಿ ನಾಡುಕ್ಕಾವೆರಿ ಪಿಳ್ಳೈಯಾರ್ ದೇವಾಲಯದಲ್ಲಿ ತಂಗಿದ್ದರು : ಆ ರಾತ್ರಿ ಅವರಿಗೆ ತೀವ್ರವಾಗಿ ಹೊಟ್ಟೇನೋವಾಯಿತು : ಮತ್ತು ಅವರ ಸ್ವಪ್ನದಲ್ಲಿ, ಅವರು ಬೆಳಿಗ್ಗೆ ಎದ್ದೊಡನೆ ಕಾಣುವ ಜೀವಿತ ಪರ್ಯಂತ ಪ್ರಾಣಿಯನ್ನು ಹಿಂಬಾಲಿಸುವಂತೆ ದೈವ ಪ್ರೇರಣೆಯಾಯಿತು : ಬೆಳಿಗ್ಗೆ ಎದ್ದೊಡನೆ ಎರಡು ಕಾಡು ಹಂದಿ (ವರಾಹ) ಗಳನ್ನು ಕಂಡು ಅವುಗಳನ್ನು ಹಿಂಬಾಲಿಸಿದರು ; ಅವು ಭೂಪತಿರಾಜಪುರದಲ್ಲಿನ ವೆಂಕಟಾಚಲಪತಿ ಸ್ವಾಮಿಯ ದೇವಾಲಯದೊಳಕ್ಕೆ ಹೊಕ್ಕು ಅಲ್ಲಿ ಅದೃಶ್ಯವಾದವು ; ಈ ಘಟನೆ ನಡೆದನಂತರ ಆ ಊರು ವರಾಹಾಪುರಿ ಎಂದು ಪ್ರಸಿದ್ಧಿಗೊಂಡಿತು : ಕ್ರಮೇಣ ಜನರು ಅದನ್ನು ವರಾಹಾಪೂರು ಎಂದು ಕರೆಯಲುಪಕ್ರಮಿಸಿದರು

ಅಲ್ಲಿ ನಾರಾಯಣತೀರ್ಥರಿಗೆ ಹೊಟ್ಟೇನೋವು ಗುಣವಾಯಿತು, ಅವರು ತಮ್ಮ ಜೀವಿತವೆಲ್ಲವನ್ನೂ ಅಲ್ಲೇ ಕಳೆದರು : ಚಕ್ರ ಪಾಣಿ ಮೂಲಾಪನವನ್ನು ಸಾಚಾಸಿ, ಲಕ್ಷ್ಮೀನಾರಾಯಣ ಪ್ರತಿಷ್ಠೆ ಮಾಡಿದರು : ದೇವಾಲಯದಲ್ಲಿ ಈಗಿರುವ ಉತ್ಸವಮೂರ್ತಿಗಳನ್ನು (ಶ್ರೀ ವೆಂಕಟಾಚಲಪತಿ ಮತ್ತು ಉಭಯನಚ್ಚಿಯಾರ್) ಮೂಲವಾ ಪ್ರತಿಷ್ಠೆಗೆ ಮುಂಜೆಯೇ ಒಬ್ಬ ಯತೀಂದ್ರರು ತಿರುಪತಿಯಿಂದ ತಂದಿಟ್ಟಿದ್ದರು.

ನಂತರ ನಾರಾಯಣತೀರ್ಥರು ಕೃಷ್ಣಲೀಲಾತರಂಗಿಣಿಯನ್ನು ರಚಿಸಿದರು ; ಎಗ್ಗಿಹಗಳ ನಾಶ ಒಂದು ತೆರೆಯನ್ನು ಕಟ್ಟಿ, ತನ್ನ ಯಾವ ಕೃತಿಗೆಳು ನಿನ್ನ ಮನ ಒಪ್ಪಿದೆಯೋ ಅದಕ್ಕನುಸಾರವಾಗಿ ಸೃತ್ಯಮಾಡು ಎಂದು ದೇವರನು ಪ್ರಾರ್ಥಿಸಿ, ತನ್ನ ತರಂಗಿಣಿಯನ್ನು ಪರಿಶೀಲುಪಕ್ರಮಿಸಿದಾಗ, ದೇವಾಲಯದ ಗರ್ಭಗುಡಿಯಿಂದ ಗೆಜ್ಜೆಶಬ್ದ ಕೇಳಿಬರುತ್ತಿದ್ದುದನ್ನು ಅವರೂ ಮತ್ತು ಅಲ್ಲಿ ನೆರೆದಿದ್ದ ಗಾರ್ವಾಸ್ಥರೂ ಕೇಳಿ ಆನಂದಿಸಿದರು.

ವೆಂಕಟಾಪುರಿನಲ್ಲಿ ಕೃಷ್ಣಜನ್ಮಾಷ್ಟಮಿಯು ಪ್ರತಿ ವರ್ಷ ವೈಭವವಾಗಿ ನೆರವೇರುವುದು : ಜಗ ಕೃಷ್ಣಲೀಲಾ ತರಂಗಿಣಿಯನ್ನು ಗಾರ್ವಸ್ಥರೆಲ್ಲರು ನಾರಾಯಣ ತೀರ್ಥರು ಹೇಳಿದ್ದಂತೆ ರಾಗ ಭಾವ ತಾಳಗಳೊಡನೆ ಹಾಡುತ್ತಾರೆ ; ತರಂಗಿಣಿಯಲ್ಲಿ ಕೃಷ್ಣಜನ್ಮದಿಂದ ರುಕ್ಮಿಣಿ ಕಲ್ಯಾಣದವರೆಗಿರುವುದು.

ಶ್ರೀ ತ್ಯಾಗರಾಜರ ಮೇಲೆ ನಾರಾಯಣತೀರ್ಥರು ಪ್ರಭುತ್ವವಾದ ಪ್ರಭಾವ ಬೀರಿರುವುದು ವ್ಯಕ್ತವಾಗುತ್ತದೆ ; ತ್ಯಾಗರಾಜರು ತಮ್ಮ ಪ್ರಹ್ಲಾದಭಕ್ತವಿಜಯದಲ್ಲಿ ಅವರನ್ನು ಅಭಿನಂದಿಸಿರುವರು ; ತ್ಯಾಗರಾಜರು ಗುರುವಿನ ತಂದೆ ಸೊಂಠಿ ವೆಂಕಟಸುಬ್ಬಯ್ಯನವರು ನಾರಾಯಣತೀರ್ಥರ ಶಿಷ್ಯರಾಗಿದ್ದರು.

ಸೂಚನೆ— ತುಂದಿಸ ಪೇಜಿನ ಜೋತಿಷಿದ್ದ ಅಕ್ಷರ ಕಂಪೋಸಿಂಗ್ ಕೇಸ್ ವೇಲೆ ಜಲ್ತಿಹೊಗಿದ್ದು ಇವತ್ತು ನಾಳೆ 2 ನೇ ಪುಟ ಪ್ರಕಟನೆ ಅನಾನುಕೂಲವಾಗಿದೆ

Edited, Printed & Published by Dharma Prachara Nirata M S Krishua Rao at the Satyavadi Press Camarajapuram Mysore4

ಕೇಂದ್ರ ಸರಕಾರದ ಮೇಲೆ ಅವಿಶ್ವಾಸ ಸೂಚನೆ

★

ಬೆಂಗಳೂರು— 65-66 ನೇ ಸಂಕಾರಿ ವರ್ಷದಿಂದ ಸೈಕಲ್ ತೆರಿಗೆ ವಜಾ ವಜಾ ಮಾಡಬೇಕೆಂಬ ಸ್ವಾಭಿಂಡಿಂಗು ಕವಿಟಿಯು ಶಂಕಾವನ್ನು ಕಾರ್ಪೊರೇಷನ್ ಸಭೆಯು ನಿನ್ನೆ ಅನುಮೋದಿಸಿತು

ಬರ್ನ್— ಸ್ವಿಸ್ ಸಾಗರಂದಾಚೆ ನೆರೆಯ ಸ್ನೇಹ ನುಡಿ ಭಾರತಕ್ಕೆ 4000000 ಲಕ್ಷ ಡಾಲರ್ ಕೊಡಲು ಪ್ರತಿಜ್ಞೆ ಮಾಡಲಾಗಿದೆ

ವಿಶ್ವಸಂಸ್ಥೆ— ಸೈಪ್ರಸ್ಸಿನಲ್ಲಿ ಶಾಂತಿ ಸ್ಥಾಪನೆಯ ಕಾರ್ಯಕ್ಕೆ ವಿಶ್ವಸಂಸ್ಥೆಗೆ ಜಪಾನು 100000 ಡಾಲರು ಚಂದಾ ಕೊಟ್ಟಿದೆ

ತಿರುಚಿ— ಹಿಂದೀವಿರುದ್ಧದ ಚಳವಳಿಗಾಗಿ ಸೆಂಟ್ ಜೋಸೆಫ್ ಕಾಲೇಜು ಅನಿರ್ದಿಷ್ಟ ಕಾಲ ಮುಚ್ಚಲಾಗಿದೆ

ನಾಳೆಯ ಪಂಚಾಂಗ

ಅಸ್ಥಾನಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ರಾಜಕಾರ್ಯಾಪಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣಜೋಯಿಸರಿಂದ

11 ಗುರುವಾರ ಅಷ್ಟಮಿ-ನವಮಿ ವ್ಯತೀಪಾ

ನವದೆಹಲಿ— ಪ್ರಧಾನಿ ಶಾಸ್ತ್ರಿಗಳ ಸಾರ್ವಭೌಮತ್ವದ ಮೇಲೆ ಅವಿಶ್ವಾಸ ಸೂಚನೆ ಚರ್ಚೆಗೆ ಲೋಕಸಭೆ ನಿನ್ನೆ ಸಮ್ಮತಿ ಕೊಟ್ಟಿತು ; 10 ತಿಂಗಳಲ್ಲಿ ಇದು ಎರಡನೇ ಅವಿಶ್ವಾಸ ಸೂಚನೆಯಾಗಿದೆ.

ನಡಿದೆಹಲಿ— ಭಾಷಾವಾರು ಪ್ರಶ್ನೆ ಕುರಿತಯಾವ ನೇರ ಕಾರ್ಯಾಚರಣೆಯನೂ ನಡೆಸಬಾರದೆಂದೂ ಸ್ವಲ್ಪ ಕಾಲ ಸಂಕಾರಿದ್ದು ಈ ಪ್ರಮುಖ ವಿಷಯದಲ್ಲಿ ಏನು ಮಾಡಬೇಕೆಂಬುದನ್ನು ನೋಡಬೇಕೆಂದೂ ಮದರಾಸು ವಿದ್ಯಾರ್ಥಿಗಳಿಗೆ ಪ್ರಧಾನಿ ಶಾಸ್ತ್ರಿಗಳು ವಿಜ್ಞಾಪಿಸಿರುವರು

ನವದೆಹಲಿ— ರೈಲು ದರ ಹೆಚ್ಚಿಸುವ ವಿಷಯದಲ್ಲಿ ಯಾವ ರೀತಿ ರಿಯಾಯಿತಿಯೂ ಇಲ್ಲವೆಂದು ಲೋಕಸಭೆಯಲ್ಲಿ ನಿನ್ನೆ ತಿಳಿಸಲಾಯಿತು.

ಬೊಂಬಾಯಿ— ಎಲ್ ಐ ಸಿಯ 800 ಅಧಿಕಾರಿಗಳನ್ನು ಅನಿರ್ದಿಷ್ಟ ಕಾಲ ಲೇಖಣಿ ಕೆಳಗಿಟ್ಟು ಬಸ್ ನೆಸ್ ಬಂಧ್ ಮುಷ್ಕರ ನಿನ್ನೆಯಿಂದ ಹೂಡಿರುವರು.

ನವದೆಹಲಿ— ನಿರುದ್ಯೋಗ ವಿಮೆಯು ಸ್ವೀಕೃತವಾಗಿದೆಯೆಂದು ಪರಿಗಣಿಸಿದ್ದವಾಗಿದೆಯೆಂದು ಪರಿಗಣಿಸಿದೆ.

ವುಡ್‌ಲಾಂಡ್ಸ್ 12-3-65 ರಿಂದ
ಅಮೋಘ ಪ್ರಾರಂಭ
ವಿವಿಲ್ ರಾಮಮೂರ್ತಿ— ಮನಮೋಹಕ ಹಿಂದಿ ಚಿತ್ರ
ಬೆನೆಜ್ಜೀರ್ BENAZIR
ಅಪೆರಾ— ಈ ದಿವಸ
ನಾಗಪೂಜಾ (ಕನ್ನಡ)
ಪಾತ್ರಗಣ— ರಾಜಕುಮಾರ್, ಲೀಲಾವತಿ ರಾಜಶ್ರೀ, ರಾಘವೇಂದ್ರರಾವ್